**ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಕುಲಪತಿಗಳ ಸಭಾಂಗಣದಲ್ಲಿ ದಿನಾಂಕ 15-4-2011 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ನಾಲ್ಕನೇಯ ಸಭೆಯ ನಡುವಳಿಗಳು:**

**ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಡಾ. ಬಿ.ವಿ. ಪಾಟೀಲ | ಅಧ್ಯಕ್ಷರು |
| 2. | ಶ್ರೀ ಎಂ.ಎಸ್. ಸೋಮಲಿಂಗಪ್ಪ | ಸದಸ್ಯರು |
| 3. | ಶ್ರೀ ಭೋಜನಗೌಡ | ಸದಸ್ಯರು |
| 4. | ಶ್ರೀ ಶಂಕರಗೌಡ ಹರವಿ | ಸದಸ್ಯರು |
| 5. | ಶ್ರೀ ವೆಂಕನಗೌಡ ಮಲ್ಕಾಪುರ | ಸದಸ್ಯರು |
| 6. | ಶ್ರೀ ಶಿವಪ್ಪ ಬಿ. ಬಲ್ಲಿದವ | ಸದಸ್ಯರು |
| 7. | ಶ್ರೀ ಹನುಮೇಶ ನಾಯಕ | ಸದಸ್ಯರು |
| 8. | ಡಾ. ಚಲ್ಲಯ್ಯ | ಸದಸ್ಯರು |
| 9. | ಶ್ರೀ ಬಸವರಾಜ ಪಾಟೀಲ ಇಟಗಿ | ಸದಸ್ಯರು |
| 10. | ಶ್ರೀ ಜಿ. ತಿಮ್ಮನಗೌಡ ಪಾಟೀಲ್ | ಸದಸ್ಯರು |
| 11. | ಡಾ. ಎಸ್.ಜಿ. ಪಾಟೀಲ | ಸದಸ್ಯರು |
| 12. | ಡಾ. ಪಿ. ಬಾಲಕೃಷ್ಣನ್ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ನಾಲ್ಕನೇಯ ಸಭೆಗೆ ಸರ್ವಸದಸ್ಯರನ್ನು ಸ್ವಾಗತಿಸಿದರು. ಅಜೆಂಡಾ ಐಟಂವಾರು ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಮಾನ್ಯ ಸದಸ್ಯರಾದ ಶ್ರೀ ವೆಂಕನಗೌಡ ಮಲ್ಕಾಪುರ ಅವರು ಅಜೆಂಡಾ ಐಟಂಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಕನ್ನಡದಲ್ಲಿಯೂ ಸಹ ಒದಗಿಸುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು. ಮಾನ್ಯ ಸದಸ್ಯರಾದ ಶ್ರೀ ಎಂ.ಎಸ್. ಸೋಮಲಿಂಗಪ್ಪ ಅವರು ಆಡಳಿತ ವಿಷಯಗಳನ್ನು ಕನ್ನಡದಲ್ಲಿ ವ್ಯವಹರಿಸು ಕುರಿತಾದ ಸರಕಾರದ ಆದೇಶಗಳನ್ನು ಉಲ್ಲೇಖಿಸಿದರು. ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಅಧಿಕಾರಿಗಳ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ವಿಳಂಬ ಮಾಡುತ್ತಿರುವುದರ ಕುರಿತು ಕೇಳಲಾದ ಪ್ರಶ್ನೆಗೆ, ಅಧ್ಯಕ್ಷರು ಉತ್ತರಿಸುತ್ತಾ ಈಗಾಗಲೇ ಈ ಕುರಿತು ಮೂರು ಪತ್ರಗಳನ್ನು ಸರಕಾರಕ್ಕೆ ಸಲ್ಲಿಸಿದ್ದು, ಘನ ಸರಕಾರದ ಅನುಮತಿಗಾಗಿ ಕಾಯುತ್ತಿರುವುದಾಗಿ ಸ್ಪಷ್ಟಪಡಿಸಿದರು. ಮಾನ್ಯ ಸದಸ್ಯರಾದ ಶ್ರೀ ಭೋಜನಗೌಡ ಮತ್ತು ಶ್ರೀ ಜಿ. ತಿಮ್ಮನಗೌಡ ಪಾಟೀಲ ಅವರುಗಳು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಅಧಿಕಾರಿಗಳವರನ್ನು ಪ್ರಭಾರೆಯಾಗಿ ಮಾಡುವಾಗ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳನ್ವಯ ಸುತ್ತು ಸರದಿಯ ಆಧಾರದ ಮೇಲೆ ಮಾಡಲು ಸಲಹೆ ನೀಡಿದಾಗ, ಅಧಿಕಾರಿಗಳವರನ್ನು ಪ್ರಭಾರೆಯಾಗಿ ಮಾಡುವಾಗ ಶಿಕ್ಷಕರುಗಳ ಜೇಷ್ಠತೆಯನ್ನು ಆಧರಿಸಿ ಮಾಡಲಾಗಿದೆಯೆಂದು ಅಧ್ಯಕ್ಷರು ಉತ್ತರಿಸಿದರು. ಮಾನ್ಯ ಸದಸ್ಯರಾದ ಡಾ. ಚಲ್ಲಯ್ಯ ಅವರು ಕಾಯ್ದೆ ಪ್ರಕಾರ ಪ್ರತಿ ಸಲವೂ ಆರು ತಿಂಗಳ ಅವಧಿಗೆ ವ್ಯವಸ್ಥಾಪನಾ ಮಂಡಳಿಯ ಒಪ್ಪಿಗೆ ಪಡೆದು ಪ್ರಭಾರೆ ವ್ಯವಸ್ಥೆಯನ್ನು ಮಾಡಲು ಸಲಹೆ ನೀಡಿದರು. ಮಾನ್ಯ ಸದಸ್ಯರಾದ ಶ್ರೀ ಜಿ. ತಿಮ್ಮನಗೌಡ ಪಾಟೀಲ ಮತ್ತು ಶ್ರೀ ಭೋಜನಗೌಡ ಅವರುಗಳು ಶಿಕ್ಷಕರುಗಳ ಜೇಷ್ಠತಾ ಪಟ್ಟಿಯ ವಿವರಗಳನ್ನು ಒದಗಿಸಲು ವಿನಂತಿಸಿಕೊಂಡರು (ಪ್ರತಿಯನ್ನು ಲಗತ್ತಿಸಲಾಗಿದೆ).

---

**ಅನುಕ್ರಮ ಸಂ: 1 ಹೊಸದಾಗಿ ರಚಿಸಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪರಿನಿಯಮಗಳಿಗೆ ಅನುಮೋದನೆ ಕುರಿತು**

---

ಹೊಸದಾಗಿ ರಚಿಸಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪರಿನಿಯಮಾವಳಿಗಳ ಕುರಿತು ಚರ್ಚಿಸುತ್ತಾ ಮಾನ್ಯ ಸದಸ್ಯರಾದ ಶ್ರೀ ಎಂ.ಎಸ್. ಸೋಮಲಿಂಗಪ್ಪ, ಶ್ರೀ ವೆಂಕನಗೌಡ ಮಲ್ಕಾಪುರ, ಶ್ರೀ ಜಿ. ತಿಮ್ಮನಗೌಡ ಪಾಟೀಲ

ಹಾಗೂ ಇತರೇ ಸದಸ್ಯರುಗಳು ಪರಿನಿಯಮಗಳನ್ನು ಭಾಷಾಂತರಗಾರರಿಂದ / ನಿಪುಣರಿಂದ / ಸಿರುಗುಪ್ಪಾದ ಕನ್ನಡ ಉಪನ್ಯಾಸಕರಿಂದ / ಕನ್ನಡ ಸಾಹಿತ್ಯ ಪರಿಷತ್ತು ಇತ್ಯಾದಿ ಅವರುಗಳಿಂದ ಕನ್ನಡದಲ್ಲಿ ಆದಷ್ಟು ಬೇಗ ಭಾಷಾಂತರಿಸಲು ಸಲಹೆ ನೀಡಿದರು, ಮತ್ತು ಇದನ್ನು ಮುಂಬರುವ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಚರ್ಚಿಸಲಾಗುವುದು. ಮಾನ್ಯ ಸದಸ್ಯರಾದ ಡಾ. ಚಲ್ಲಯ್ಯ, ಶ್ರೀ ಜಿ. ತಿಮ್ಮನಗೌಡ ಪಾಟೀಲ ಹಾಗೂ ಇತರೇ ಸದಸ್ಯರುಗಳು ಇನ್ನೂ ಎರಡು ಉಪ–ಸಮಿತಿಗಳು ಅಂದರೆ ಒಂದು ವರ್ಷದ ಅವಧಿಯಂತೆ ಇತರ ಸದಸ್ಯರನ್ನೊಳಗೊಂಡು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರ ಅಧ್ಯಕ್ಷತೆಯನ್ನು ಹೊಂದಿರುವ ವಿಸ್ತರಣಾ ಹಾಗೂ ಪ್ರಕಟಣಾ ಸಮಿತಿ ಮತ್ತು ಕುಂದುಕೊರತೆ ನಿವಾರಣಾ ಸಮಿತಿಗಳನ್ನು ಪರಿನಿಯಮಗಳಲ್ಲಿ ಸೇರಿಸಲು ಸಲಹೆ ನೀಡಿದರು. ಮಾನ್ಯ ಸದಸ್ಯರುಗಳು ಸದರಿ ಸಮಿತಿಗಳನ್ನು ಆದಷ್ಟು ಬೇಗ ರಚಿಸಲು ನೀಡಿದ ಸಲಹೆಗೆ ಅಧ್ಯಕ್ಷರು ಉತ್ತರಿಸುತ್ತಾ, ಪರಿನಿಯಮಗಳಿಗೆ ಸರಕಾರದ ಅನುಮೋದನೆ ಹಾಗೂ ಘನವೆತ್ತ ರಾಜ್ಯಪಾಲರು ಮತ್ತು ಕೃವಿವಿ ರಾಯಚೂರಿನ ಕುಲಾಧಿಪತಿಗಳ ಸಮ್ಮತಿ ಪಡೆದ ನಂತರವೇ ಮಾತ್ರ ಈ ಸಮಿತಿಗಳನ್ನು ರಚಿಸಬಹುದೆಂದು ತಿಳಿಸಿದರು.

**ಠರಾವು:**

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಐಟಂ ಅನ್ನು ದೀರ್ಘವಾಗಿ ಚರ್ಚಿಸಿ ಕನ್ನಡದಲ್ಲಿ ಭಾಷಾಂತರಿಸಿದ ಪರಿನಿಯಮಗಳನ್ನು ಒದಗಿಸುವಂತೆ ಸಲಹೆ ನೀಡಿದರು.

(ಕ್ರಮ: ಕುಲಸಚಿವರು, ಕೃವಿವಿ ರಾಯಚೂರು)

---

| ಅನುಕ್ರಮ ಸಂ: 2 | **ಅತ್ಯುತ್ತಮ ಬೋಧಕ / ವಿಜ್ಞಾನಿಗಳು ಮತ್ತು ಸೇವಾ ಸಿಬ್ಬಂದಿ / ಸಂಶೋಧನಾ ಕೇಂದ್ರ ಇವರುಗಳಿಗೆ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪ್ರಶಸ್ತಿಗಳನ್ನು ಪಡೆಯುವವರ ಹಾಗೂ ಸಂಶೋಧನಾ ಯೋಜನೆಗಳನ್ನು ಪಡೆದಿರುವ ವಿಜ್ಞಾನಿಗಳಿಗೆ ಪ್ರೋತ್ಸಾಹ ಧನ ಪ್ರಶಸ್ತಿಗಳನ್ನು ನೀಡಬೇಕಾಗಿರುವವರ ಯಾದಿಗೆ ಅನುಮೋದನೆ ಕುರಿತು** |
|---|---|

ಮಾನ್ಯ ಸದಸ್ಯರಾದ ಶ್ರೀ ಭೋಜನಗೌಡ ಅವರು ಸಿಬ್ಬಂದಿಯವರ ಪ್ರಶಸ್ತಿಗಳನ್ನು ಜಿಲ್ಲಾವಾರು / ಕೇಂದ್ರವಾರು ಸ್ಥಾಪಿಸಲು ಸಲಹೆ ನೀಡಿದರು, ಮಾನ್ಯ ಸದಸ್ಯರಾದ ಡಾ. ಚಲ್ಲಯ್ಯ ಅವರು ಸಿಬ್ಬಂದಿಯವರ ವಿವಿಧ ಹುದ್ದೆಗಳವಾರು ಪ್ರಶಸ್ತಿಗಳನ್ನು ಸ್ಥಾಪಿಸಲು ಸಲಹೆ ನೀಡಿದರು. ಮಾರ್ಗಸೂತ್ರಗಳ ಪ್ರಕಾರ ವಿಶ್ವವಿದ್ಯಾಲಯ ಮಟ್ಟದಲ್ಲಿ ವಿವಿಧ ಕಾರ್ಯಚಟುವಟಿಕೆಗಳು / ವೃಂದಗಳಿಗೆ ಒಂದು ಪ್ರಶಸ್ತಿಯನ್ನು ಮಾತ್ರ ಕೊಡುವ ಅವಕಾಶವಿರುತ್ತದೆಯೆಂದು ತಿಳಿಸಿತ್ತಾ, ಹೊಸದಾಗಿ ಪ್ರಶಸ್ತಿಗಳನ್ನು ಸ್ಥಾಪಿಸುವುದಿದ್ದರೆ, ಆ ವಿಷಯವನ್ನು ಮುಂಬರುವ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಚರ್ಚಿಸಬಹುದೆಂದು ಸಭೆಯ ಗಮನಕ್ಕೆ ತಂದರು.

**ಠರಾವು:**

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅತ್ಯುತ್ತಮ ಬೋಧಕ / ವಿಜ್ಞಾನಿಗಳು ಮತ್ತು ಸೇವಾ ಸಿಬ್ಬಂದಿ / ಸಂಶೋಧನಾ ಕೇಂದ್ರ ಇವರುಗಳಿಗೆ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪ್ರಶಸ್ತಿಗಳನ್ನು ಪಡೆಯುವವರ ಹಾಗೂ ಸಂಶೋಧನಾ ಯೋಜನೆಗಳನ್ನು ಪಡೆದಿರುವ ವಿಜ್ಞಾನಿಗಳಿಗೆ ಪ್ರೋತ್ಸಾಹ ಧನ ಪ್ರಶಸ್ತಿಗಳನ್ನು ನೀಡಬೇಕಾಗಿರುವವರ ಯಾದಿ ಕುರಿತು ಚರ್ಚಿಸಿ ಅನುಮೋದನೆ ನೀಡಿತು.

(ಕ್ರಮ: ಕುಲಸಚಿವರು, ಕೃವಿವಿ ರಾಯಚೂರು)

---

| ಅನುಕ್ರಮ ಸಂ: 3 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪ್ರಸ್ತಾವಿತ ಆಡಳಿತ ಭವನದ ಕಟ್ಟಡದ ಮುಂಭಾಗದ ವಿನ್ಯಾಸವನ್ನು ಅಂತಿಮಗೊಳಿಸುವ ಕುರಿತು.** |
|---|---|

ಮೆ. ವೈಷ್ಣವಿ ಕನ್ಸಲ್ಟಂಟ್ಸ್, ಹುಬ್ಬಳ್ಳಿ ಇವರು ಸಲ್ಲಿಸಿರುವ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪ್ರಸ್ತಾವಿತ ಆಡಳಿತ ಭವನದ ಕಟ್ಟಡದ ಉತ್ತಮ ಡಿಸೈನಗಳುಳ್ಳ ಮುಂಭಾಗದ ಕೆಲವು ಚಿತ್ರಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃವಿವಿ ರಾಯಚೂರು ಇವರು ಪ್ರಸ್ತುತಪಡಿಸಿದರು.

**ಠರಾವು:**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪ್ರಸ್ತಾವಿತ ಆಡಳಿತ ಭವನದ ಕಟ್ಟಡದ ಉತ್ತಮ ಡಿಸೈನಗಳುಳ್ಳ ಮುಂಭಾಗದ ಚಿತ್ರಗಳನ್ನು ಪ್ರಸ್ತುತಪಡಿಸಿದುದನ್ನು ದೀರ್ಘವಾಗಿ ಚರ್ಚಿಸಿ, ಅವುಗಳಲ್ಲಿ ಒಂದನ್ನು ಆಯ್ಕೆ ಮಾಡಿ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು (ಡಿಸೈನಿನ ಪ್ರತಿಯನ್ನು ಲಗತ್ತಿಸಲಾಗಿದೆ). ಮಂಡಳಿಯು ಆದಷ್ಟು ಬೇಗನೆ ಟೆಂಡರ್ ಪ್ರಕ್ರಿಯೆ ಕರೆದು ಕಾಮಗಾರಿ ಕೆಲಸವನ್ನು ಕೈಗೆತ್ತಿಕೊಳ್ಳಲು ಸೂಚಿಸಿತು.

(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು, ಕೃವಿವಿ ರಾಯಚೂರು)

---

| ಅನುಕ್ರಮ ಸಂ: 4 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ 2011–'12 ಸಾಲಿನಲ್ಲಿ ಕೈಗೊಳ್ಳಲಾಗುವ ಹೊಸ ಸಿವಿಲ್ ಕಾಮಗಾರಿಗಳಿಗೆ ಅನುಮೋದನೆ ಕುರಿತು.** |
|---|---|

ಮಾನ್ಯ ಸದಸ್ಯರಾದ ಶ್ರೀ ಭೋಜನಗೌಡ ಅವರು ಕೃಷಿ ಸಂಶೋಧನಾ ಕೇಂದ್ರ ಕವಡಿಮಟ್ಟಿಯ ಕಂಪೌಂಡ್ ಗೋಡೆ ಕಾಮಗಾರಿ ಕೈಗೊಳ್ಳಲು ಸಲಹೆ ನೀಡಿದಾಗ, ಅಧ್ಯಕ್ಷರು ಈ ಕಾಮಗಾರಿಯನ್ನು ಈಗಾಗಲೇ ಸೇರಿಸಲಾಗಿದೆಯೆಂದು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಜಿ. ತಿಮ್ಮನಗೌಡ ಪಾಟೀಲ ಹಾಗೂ ಶ್ರೀ ವೆಂಕನಗೌಡ ಮಲ್ಲಾಪುರ ಇವರುಗಳು ಟೆಂಡರ್ ನೋಟಿಫಿಕೇಶನ್ ಆದ ಎಲ್ಲಾ ಕಾಮಗಾರಿಗಳ ಮಾಹಿತಿಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಎಲ್ಲಾ ಸದಸ್ಯರುಗಳಿಗೆ ಒದಗಿಸಲು ವಿನಂತಿಸಿಕೊಂಡರು. ಮಾನ್ಯ ಸದಸ್ಯರಾದ ಶ್ರೀ ಎಂ.ಎಸ್. ಸೋಮಲಿಂಗಪ್ಪ ಅವರು ಕೃವಿವಿಯಲ್ಲಿ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳುವಾಗ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ನೀಡಿದ ಸಲಹೆಗಳನ್ನು ಪರಿಗಣಿಸಲು ವಿನಂತಿಸಿಕೊಂಡರು. ಹೆಚ್ಚುವರಿ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳುವಾಗ ಮಾನ್ಯ ಸದಸ್ಯರುಗಳು ಸಲಹೆಗಳನ್ನು ನೀಡಲು ಮತ್ತು ಅವುಗಳನ್ನು ಮುಂಬರುವ ಸಭೆಗಳಲ್ಲಿ ಚರ್ಚಿಸಿ, ಅಂತಿಮಗೊಳಿಸಿ ಅನುಮೋದನೆ ನೀಡಲು ವಿನಂತಿಸಿಕೊಂಡರು.

**ಠರಾವು:**

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ 2011–'12 ಸಾಲಿನಲ್ಲಿ ಕೈಗೊಳ್ಳಲಾಗುವ ಹೊಸ ಸಿವಿಲ್ ಕಾಮಗಾರಿಗಳ ಐಟಂ ಅನ್ನು ಚರ್ಚಿಸಿ ಅನುಮೋದನೆ ನೀಡಿತು.

(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು, ಕೃವಿವಿ ರಾಯಚೂರು)

---

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

---

1. ಮಾನ್ಯ ಸದಸ್ಯರಾದ ಶ್ರೀ ಹನುಮೇಶ ನಾಯಕ ಅವರು ಕೃಷಿ ಸಂಶೋಧನಾ ಕೇಂದ್ರ ಗಂಗಾವತಿಯಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳು ಲಭ್ಯವಿರುವ್ಯದರಿಂದ ಅಲ್ಲಿ ಒಂದು ಕೃಷಿ ಮಹಾವಿದ್ಯಾಲಯವನ್ನು ಗಂಗಾವತಿಯಲ್ಲಿ ಪ್ರಾರಂಭಿಸಲು ಸಲಹೆ ನೀಡಿದಾಗ, ಅದಕ್ಕೆ ಮಾನ್ಯ ಸದಸ್ಯರಾದ ಶ್ರೀ ಎಂ.ಎಸ್. ಸೋಮಲಿಂಗಪ್ಪ ಹಾಗೂ ಶ್ರೀ ಜಿ. ತಿಮ್ಮನಗೌಡ ಪಾಟೀಲ ಅವರುಗಳು ಬೆಂಬಲ ವ್ಯಕ್ತಪಡಿಸಿದರು. ಹೊಸದಾಗಿ ಮಹಾವಿದ್ಯಾಲಯವನ್ನು ಪ್ರಾರಂಭಿಸುವ ಕುರಿತು ಅಧ್ಯಕ್ಷರು ಉತ್ತರಿಸುತ್ತಾ, ಮೊದಲು ಜನಪ್ರತಿನಿಧಿಗಳಿಂದ ಅಂತಹ ಪ್ರಸ್ತಾವನೆಗಳು ಬಂದಿರಬೇಕು, ಈಗಾಗಲೇ ಅಂತಹ ಪ್ರಸ್ತಾವನೆಯನ್ನು ಆಧಾರವಾಗಿಟ್ಟುಕೊಂಡು ಗಂಗಾವತಿಯಲ್ಲಿ ಹೊಸ ಕೃಷಿ ಮಹಾವಿದ್ಯಾಲಯವನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಸರಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದೆಯೆಂದು ತಿಳಿಸಿದರು. ಗಂಗಾವತಿಯಲ್ಲಿ ಹೊಸ ಕೃಷಿ ಮಹಾವಿದ್ಯಾಲಯವನ್ನು ಪ್ರಾರಂಭಿಸುವಂತೆ ಸರಕಾರಕ್ಕೆ ವಿನಂತಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಶಿಫಾರಸ್ಸು ಮಾಡಿತು.

2. ಮಾನ್ಯ ಸದಸ್ಯರಾದ ಶ್ರೀ ಭೋಜನಗೌಡ ಅವರು ಕೃಷಿ ವಿಜ್ಞಾನ ಕೇಂದ್ರಗಳಲ್ಲಿಯ ಎಪ್ರೀಲ್, 2011 ರ ಚಟುವಟಿಕೆಗಳ ಮಾಹಿತಿಯು ಮಾನ್ಯ ಸದಸ್ಯರಿಗೆ ತಲುಪಿರುವುದಿಲ್ಲವೆಂದು ಅಭಿವ್ಯಕ್ತಪಡಿಸಿದರು. ಇದಕ್ಕೆ ಅಧ್ಯಕ್ಷರು ಉತ್ತರಿಸುತ್ತಾ ಎಪ್ರೀಲ್, 2011 ರಲ್ಲಿ ಕೆವಿಕೆ ರಾಯಚೂರಿನಲ್ಲಿ ಯಾವುದೇ ತರಬೇತಿಗಳನ್ನು ಏರ್ಪಡಿಸಲಾರದ ಕಾರಣ

ಅವುಗಳ ಮಾಹಿತಿಯನ್ನು ನೀಡಿರುವುದಿಲ್ಲ. ಮೇ, 2011 ರಿಂದ ಕೆವಿಕೆಯಲ್ಲಿ ಏರ್ಪಡಿಸಲಾಗುವ ತರಬೇತಿಗಳ ಮಾಹಿತಿಯನ್ನು ಎಲ್ಲಾ ಸದಸ್ಯರುಗಳಿಗೆ ಕಳುಹಿಸಲಾಗುವುದೆಂದು ತಿಳಿಸಿದರು.

3. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶ್ರೀರಾಮುಲು ಹಾಗೂ ಜಿಲ್ಲಾಧಿಕಾರಿಗಳು ದಿನಾಂಕ 14ನೇ ಎಪ್ರೀಲ್, 2011 ರಂದು ಆವರಣಕ್ಕೆ ಭೇಟಿ ನೀಡಿ ಸಭೆಯನ್ನು ನಡೆಸಿದ ಹಾಗೂ ಈ ಆವರಣದ ಸರ್ವೆ ನಂ. 114 ರಲ್ಲಿ 7 ಎಕರೆ ಭೂಮಿಯನ್ನು ಜಿಲ್ಲಾ ಆಡಳಿತ ಭವನ ಕಟ್ಟಡಕ್ಕಾಗಿ ಬೇಕಾಗಿದೆಯೆಂಬ ವಿಷಯವನ್ನು ಅಧ್ಯಕ್ಷರು ಘನ ವೇದಿಕೆಯ ಅವಗಾಹನೆಗೆ ತಂದರು. ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಪಾಟೀಲ ಇಟಗಿ, ಶ್ರೀ ಎಂ.ಎಸ್. ಸೋಮಲಿಂಗಪ್ಪ ಹಾಗೂ ಇತರೇ ಸದಸ್ಯರುಗಳು ಕೃವಿವಿ ರಾಯಚೂರಿನ ಭೂಮಿಯನ್ನು ಜಿಲ್ಲಾ ಆಡಳಿತ ಭವನ ಕಟ್ಟಡಕ್ಕಾಗಿ ಕೊಡುವ ವಿಷಯವನ್ನು ಈ ಕೆಳಕಂಡ ಕಾರಣಗಳನ್ನು ಸೂಚಿಸುತ್ತಾ ತಿರಸ್ಕರಿಸಲು ಸಲಹೆ ನೀಡಿದರು.

i) ಪ್ರಸ್ತುತ ಕೃವಿವಿ ರಾಯಚೂರು ಆವರಣದಲ್ಲಿ 680 ಎಕರೆ ಭೂಮಿ ಹೊಂದಿದ್ದು, ಶೈಕ್ಷಣಿಕ, ಸಂಶೋಧನಾ ಮತ್ತು ವಿಸ್ತರಣಾ ಚಟುವಟಿಕೆಗಳನ್ನು ಕೈಗೊಳ್ಳಲು ಸಾಕಾಗುತ್ತಿಲ್ಲ ಹಾಗೂ ಇನ್ನೂ 200 ಎಕರೆ ಭೂಮಿಯನ್ನು ಮೇಲಿನ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಬೇಕಾಗುವುದು.

ii) ಪ್ರಸ್ತಾವಿತ ಜಿಲ್ಲಾ ಆಡಳಿತ ಭವನ ಕಟ್ಟಡ ನಿರ್ಮಾಣವಾದರೆ, ಸಾರ್ವಜನಿಕರ ಓಡಾಟದಿಂದ ಹಾಗೂ ಅದರಿಂದುಟಾಗುವ ತೊಂದರೆಯಿಂದಾಗಿ ವಿಶ್ವವಿದ್ಯಾಲಯದಲ್ಲಿಯ ಶೈಕ್ಷಣಿಕ ವಾತಾವರಣವು ಕಲುಷಿತಗೊಳ್ಳುತ್ತದೆ.

iii) ವಿಶ್ವವಿದ್ಯಾಲಯದಲ್ಲಿಯದ ಪ್ರತೀಷ್ಠೆಯು ಕುಗ್ಗುತ್ತದೆ.

iv) ವಿಶ್ವವಿದ್ಯಾಲಯದಲ್ಲಿಯು ಇನ್ನೂ ಬಾಲ್ಯವಸ್ಥೆಯಲ್ಲಿದ್ದು, ಮುಂದಿನ ವರ್ಷಗಳಲ್ಲಿ ಅದರ ವಿಸ್ತಾರಗೊಳಿಸುವಿಕೆಯ ಮತ್ತು ಅಭಿವೃದ್ಧಿ ಕಾರ್ಯಗಳ ಜೊತೆಗೆ ಮುಂದುವರಿದ ಅಧ್ಯಯನ ಕೇಂದ್ರ / ಉತ್ಕೃಷ್ಟ ಕೇಂದ್ರಗಳ ಸ್ಥಾಪನೆಯ ಸಲುವಾಗಿ ಕಟ್ಟಡಗಳಿಗಾಗಿ ಮತ್ತು ಪ್ರಯೋಗಾಲಯಗಳಿಗಾಗಿ ಇನ್ನೂ ಹೆಚ್ಚಿನ ಭೂಮಿಯ ಅವಶ್ಯಕತೆ ಇರುತ್ತದೆ.

v) ಜಿಲ್ಲಾ ಆಡಳಿತ ಭವನ ಕಟ್ಟಡಕ್ಕಾಗಿ ಭೂಮಿಯನ್ನು ಕೊಡುವಂಥ ಬೇಡಿಕೆಗಳು ವಿವಿಧ ಸಂಘ ಸಂಸ್ಥೆಗಳವರಿಂದ ಭೂಮಿ ಕೊಡುವ ಬೇಡಿಕೆಗಳು ಬಂದಿರುತ್ತವೆ, ಆದರೆ ಕೃವಿವಿ ರಾಯಚೂರಿನಿಂದ ಭೂಮಿಯನ್ನು ಯಾರಿಗೂ ಇದುವರೆಗೂ ಕೊಟ್ಟಿರುವುದಿಲ್ಲ.

ಹೀಗಾಗಿ. ದೀರ್ಘ ಚರ್ಚೆಯ ನಂತರ ಮಾನ್ಯ ಸರ್ವಸದಸ್ಯರುಗಳು ಕೃವಿವಿ ರಾಯಚೂರಿನ ಭೂಮಿಯನ್ನು ಜಿಲ್ಲಾಡಳಿತಕ್ಕೂ ಹಾಗೂ ವಿವಿಧ ಸಂಘ ಸಂಸ್ಥೆಗಳವರಿಗೂ ನೀಡಬಾರದೆಂದು ಒಮ್ಮತದಿಂದ ತೀರ್ಮಾನಿಸಲಾಯಿತು. ಈ ಕುರಿತು ಸರಕಾರಕ್ಕೆ ಹಾಗೂ ಜಿಲ್ಲಾಡಳಿತಕ್ಕೆ ಪತ್ರ ಬರೆಯಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಕುಲಪತಿಗಳಿಗೆ ಅಧಿಕಾರ ನೀಡಿತು.

4. ಕರ್ನಾಟಕ ಸರಕಾರವು ಆಯೋಜಿಸಿದ ಚೀನಾ / ಇಸ್ರಾಯಿಲ್ ದೇಶಕ್ಕೆ ಭೇಟಿ ಕಾರ್ಯಕ್ರಮದಲ್ಲಿ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸುರುಗಳ ಹೆಸರುಗಳನ್ನು ಸೇರಿಸುವ ಪ್ರಸ್ತಾವನೆಯನ್ನು ಈಗಾಗಲೇ ಘನ ಸರಕಾರಕ್ಕೆ ಸಲ್ಲಿಸಲಾಗಿದೆಯೆಂದು ಅಧ್ಯಕ್ಷರು ಘನ ವೇದಿಕೆಯ ಅವಗಾಹನೆಗೆ ತಂದರು. ಮಾನ್ಯ ಸದಸ್ಯರಾದ ಶ್ರೀ ಎಂ.ಎಸ್. ಸೋಮಲಿಂಗಪ್ಪ ಹಾಗೂ ಶ್ರೀ ಶಂಕರಗೌಡ ಹರವಿ ಅವರು ಇಸ್ರಾಯಿಲ್ ದೇಶದಲ್ಲಿ ಹೈ-ಟೆಕ್ ಕೃಷಿ ತಂತ್ರಜ್ಞಾನ ಚಾಲ್ತಿಯಲ್ಲಿರುವುದರಿಂದ, ಚೀನಾ ದೇಶದ ಬದಲಾಗಿ ಇಸ್ರಾಯಿಲ್ ದೇಶಕ್ಕೆ ಭೇಟಿ ನೀಡುವುದನ್ನು ಪರಿಗಣಿಸಲು ಸಲಹೆ ನೀಡಿದರು.

5. ಮಾನ್ಯ ಸದಸ್ಯರಾದ ಶ್ರೀ ಶಿವಪ್ಪ ಬಿ. ಬಲ್ಲಿದವ ಹಾಗೂ ಶ್ರೀ ಬಸವರಾಜ ಪಾಟೀಲ ಇಟಗಿ ಅವರು ದೇವದುರ್ಗ ತಾಲೂಕಿನ ಅಕ್ಕ-ಪಕ್ಕದಲ್ಲಿಯ ಸ್ವಲ್ಪ ಭೂಮಿಯನ್ನು ವಿಶ್ವವಿದ್ಯಾಲಯದ ಚಟುವಟಿಕೆಗಳಿಗಾಗಿ ಸ್ವಾಧೀನಪಡಿಸಿಕೊಳ್ಳಲು ಮತ್ತು ಅವಶ್ಯಕವಿರುವ ಸರ್ವೆ ನಂಬರುಗಳ ಮಾಹಿತಿಯನ್ನು ಸಂಗ್ರಹಿಸುವ ಕುರಿತು ಸಲಹೆ ನೀಡಿದರು. ಕರ್ನಾಟಕ ಸರಕಾರದ ಕೃಷಿ ಇಲಾಖೆ ಅಥವ ತೋಟಗಾರಿಕೆ ಇಲಾಖೆಯು ಹೊಂದಿದ ಭೂಮಿಯನ್ನು ಪಡೆಯುವುದು ಸುಲಭವಾಗುತ್ತದೆ ಆದರೆ ಬೇರೆಯವರಿಂದ ಕಷ್ಟ ಎಂದು ಅಧ್ಯಕ್ಷರು ಸಲಹೆ ನೀಡಿದರು.

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ದಿನಾಂಕ: 19–4–2011 | ದಿನಾಂಕ: 19–4–2011 |
| **(ಬಿ.ವಿ. ಪಾಟೀಲ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ<br>ಕೃವಿವಿ ರಾಯಚೂರು. | **(ಪಿ. ಬಾಲಕೃಷ್ಣನ್)**<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ<br>ಕೃವಿವಿ ರಾಯಚೂರು. |

**(ಪಿ. ಬಾಲಕೃಷ್ಣನ್)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಿಗೆ, ಕೃವಿವಿ ರಾಯಚೂರು ಇವರಿಗೆ.